# ಆಗಾಖಾನ್ ಅರಮನೆಯಲ್ಲಿ ಮಹಾತ್ಮನ ನೆನಪಿನ ನೆರಳು

■ ಆರ್ಕೆ ಆಡುಕಳ

ಆಗಾಖಾನ್ ಪ್ಯಾಲೇಸ್ ಬಗ್ಗೆ ಸಾಕಷ್ಟು ಕೇಳಿದ್ದೆ. ಆದರೆ ನೋಡಲು ಅವಕಾಶ ಸಿಕ್ಕಿದ್ದು ಕೆಲವು ದಿನಗಳ ಹಿಂದೆ ಪುಣೆಗೆ ಹೋದಾಗ. ಪುಣೆಯ ಬಿಸಿಲಿಗೆ ಹೆದರಿದ್ದ ನಾನು ಬೆಳ್ಳಂಬೆಳಿಗ್ಗೆಯೆ ಆಟೊ ಹಿಡಿದು ಹೊರಟಿದ್ದೆ. ಬೆಳಿಗ್ಗೆ 9ರಿಂದಲೇ ಪ್ರವಾಸಿಗರ ವೀಕ್ಷಣೆಗೆ ತೆರೆದಿರುತ್ತದೆ ಎಂಬುದನ್ನು ಗೂಗಲ್ ಮಾಡಿ ತಿಳಿದಿದ್ದರೂ ಸ್ಥಳ ತಲುಪಿದಾಗ 9.30 ಆಗಿತ್ತು. ಬಹು ವಿಸ್ತಾರವಾದ ಕಾಂಪೌಂಡ್ ಒಳಗಡೆ ಕಾಲಿಡುತ್ತಿದ್ದಂತೆ ಟಿಕೆಟ್ ಕೌಂಟರ್ ಕಾಣಿಸಿತು. ಟಿಕೆಟ್ ತೆಗೆದುಕೊಂಡು ಒಳ ನಡೆದಾಗ ಸ್ವಲ್ಪ ದೂರದಲ್ಲೇ ಕಾಣಿಸುತ್ತಿತ್ತು ಆಗಾಖಾನ್ ಪ್ಯಾಲೇಸ್.

ಪ್ಯಾಲೇಸ್ ಎಂದಾಗ ಕನ್ನಡಿಗರಿಗೆ ನೆನಪಾಗುವುದು ಮೈಸೂರು ಅರಮನೆ. ಆ ವೈಭವವನ್ನು ಮನಸಲ್ಲಿ ತುಂಬಿಕೊಂಡು ಹೋದರೆ ಮನಸಿಗೆ ಒಮ್ಮೆ ಪಿಚ್ಚೆನಿಸುವುದು ಸುಳ್ಳಲ್ಲ. ಹಾಗೆಂದು ಇದು ತುಂಬಾ ಚಿಕ್ಕದೂ ಅಲ್ಲ. ಇದರ ವಿನ್ಯಾಸವೇ ಬೇರೆ ರೀತಿಯಲ್ಲಿದೆ. ದೂರದಿಂದ ನೋಡಿದಾಗ ದೊಡ್ಡ ಬಂಗಲೆಯಂತೆ ಕಾಣಿಸಿದರೂ, ಹತ್ತಿರ ಹೋದಂತೆ ಅದರ ವಿಸ್ತಾರ ಅರಿವಿಗೆ ಬರುತ್ತದೆ. ಇದು ಇರುವುದು ಸುಮಾರು 19 ಎಕರೆಯಷ್ಟು ದೊಡ್ಡದಾದ ಕಾಂಪೌಂಡ್ ಒಳಗಡೆ. ಸುಮಾರು 7 ಎಕರೆಗಳಷ್ಟು ಜಾಗದಲ್ಲಿ ಅರಮನೆಯ ಕಟ್ಟಡವಿದೆ. ಇದನ್ನು ಇಸ್ಲಾಮಿಕ್ ಶೈಲಿಯಲ್ಲಿ ಕಟ್ಟಿದ್ದಾರೆ.

## ಆಗಾಖಾನ್ ಯಾರು?

ಈ ಅರಮನೆಯನ್ನು ಕಟ್ಟಿಸಿದ್ದು ಸುಲ್ತಾನ್ ಮುಹಮ್ಮದ್ ಷಾ ಆಗಾಖಾನ್ III. ಇವರು ಖಾಜೋ ಇಸ್ಲಾಮಿ ಗ್ರೂಪ್‌ನ 48ನೇ ಇಮಾಮ್ ಅಥವಾ ಧರ್ಮಗುರುಗಳು. ಆಲ್ ಇಂಡಿಯಾ ಮುಸ್ಲಿಂ ಲೀಗ್‌ನ ಮೊದಲ ಅಧ್ಯಕ್ಷರೂ ಆಗಿದ್ದರು. ಅರಮನೆಯನ್ನು ಕಟ್ಟಲು ಶುರು ಮಾಡಿದ್ದು 1869ರಲ್ಲಿ ಹಾಗೂ ಕಟ್ಟಲು 5 ವರ್ಷಗಳು ಬೇಕಾಯಿತು. ಸುತ್ತಲಿನ ಬರಗಾಲ ಪೀಡಿತ ಪ್ರದೇಶದ ಜನರಿಗೆ ಕೆಲಸ ಕೊಡುವ ಉದ್ದೇಶದಿಂದ ಸುಮಾರು 1000 ಜನರಿಗೆ ದಿನಗೂಲಿಯನ್ನು ಕೊಟ್ಟು ಈ ಅರಮನೆಯನ್ನು ನಿರ್ಮಿಸಲಾಯಿತು. ಅಂದು ಇದನ್ನು ಕಟ್ಟಲು 12 ಲಕ್ಷ ರೂಪಾಯಿ ಖರ್ಚಾಗಿತ್ತು.

## ಸ್ವಾತಂತ್ರ್ಯ ಹೋರಾಟದ ನಂಟು

ಭಾರತದ ಸ್ವಾತಂತ್ರ್ಯ ಹೋರಾಟದ ಜೊತೆಗೆ ಈ ಅರಮನೆಗೆ ನಿಕಟ ನಂಟಿದೆ. 8ನೇ ಆಗಸ್ಟ್ 1942ರಲ್ಲಿ ಮಹಾತ್ಮ ಗಾಂಧಿಯವರು 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳವಳಿಯನ್ನು ಶುರು ಮಾಡಿದ್ದರು. ಚಳವಳಿ



ಗಾಂಧಿ ಈಗಲೂ ಓದುತ್ತಾ ಕುಳಿತಿದ್ದಾರೇನೊ ಎನ್ನುವ ಅನುಭವ ಮೂಡಿಸುವ ಕಲಾಕೃತಿ